# ಅಕ್ಷಯ ಪಾತ್ರೆ




ಅಕ್ಷಯ ಕುಮಾರ್ ಅಭಿನಯದ 'ಗೋಲ್ಡ್' ವಿಮರ್ಶಕರ ಮೆಚ್ಚುಗೆ ಗಳಿಸಿದೆ, ಬಾಕ್ಸಾಫೀಸ್‌ನಲ್ಲಿ ಮಾತ್ರ ಅಷ್ಟೊಂದು ಸದ್ದು ಮಾಡುತ್ತಿಲ್ಲ. 1948ರಲ್ಲಿ ಲಂಡನ್ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ಭಾರತೀಯ ಹಾಕಿ ತಂಡದ ಯಶೋಗಾಥೆಯ ಕಥೆ ಈಗಿನ ತಲೆಮಾರಿನ ಪ್ರೇಕ್ಷಕರಿಗೆ ಅಷ್ಟೊಂದು ಖುಷಿ ಕೊಟ್ಟಂತೆ ಕಾಣುತ್ತಿಲ್ಲ. ಅದೇನೇ ಇರಲಿ, ಸೌದಿ ಅರೇಬಿಯಾದಲ್ಲಿ ಪ್ರದರ್ಶನ ಕಂಡ ಎರಡನೇ ಭಾರತೀಯ ಸಿನಿಮಾ ಎಂಬ ಹೆಗ್ಗಳಿಕೆಗೆ ಈ ಸಿನಿಮಾ ಪಾತ್ರವಾಗಿರುವುದು ಅಕ್ಷಯ್‌ಗೆ ಹೆಮ್ಮೆ ತಂದಿದೆಯಂತೆ. ಸಿನಿಮಾ ಪ್ರದರ್ಶನ ನಿಷಿದ್ಧವಾಗಿದ್ದ ಸೌದಿಯಲ್ಲಿ ಕಳೆದ ಮೇ ತಿಂಗಳಲ್ಲಿ ಸಿನಿಮಾ ಮಂದಿರಗಳು ತೆರೆದು ಕೊಂಡಿವೆ. ರಜನಿಕಾಂತ್ ಅಭಿನಯದ ಕಾಲಾ ಚಿತ್ರ ಸೌದಿಯಲ್ಲಿ ಬಿಡುಗಡೆ ಕಂಡ ಮೊದಲ ಭಾರತೀಯ ಸಿನಿಮಾ. ಇದೀಗ ಅಕ್ಷಯ್ ಸರದಿ.

ಈ ಮಧ್ಯೆ ಅಕ್ಷಯ್ ಬಹಳ ನಿರೀಕ್ಷೆ ಇಟ್ಟುಕೊಂಡಿರುವ ರಜನಿಕಾಂತ್ ಅಭಿನಯದ 2.0 ಸಿನಿಮಾ ತೆರೆಗೆ ಬರಲು ಸಿದ್ಧತೆ ನಡೆಸಿದೆ. ಬಹುತೇಕ ನವೆಂಬರ್ 29ಕ್ಕೆ ಈ ಚಿತ್ರ ಬಿಡುಗಡೆಯಾಗಲಿದೆ. ವಿಎಫ್‌ಎಕ್ಸ್ ಕಂಪೆನಿಗಳ ವಿಳಂಬದಿಂದಾಗಿ ಈ ಚಿತ್ರ ತಡವಾಗಿ ತೆರೆ ಕಾಣುತ್ತಿದೆಯಂತೆ. ಈ ಚಿತ್ರದ ಟೀಸರ್ ಬಹುತೇಕ ಲಂಡನ್ನಿನಲ್ಲಿ  ಬಿಡುಗಡೆಯಾಗಲಿದೆ ಎನ್ನುವ ಸುದ್ದಿಯೂ ಹಬ್ಬಿದೆ. ಈ ಚಿತ್ರದಲ್ಲಿ ಅಕ್ಷಯನ ವಿಲ್ಲನ್ ಪಾತ್ರದ ಗೆಟಪ್ ಈಗಾಗಲೆ ಎಲ್ಲರ ಕುತೂಹಲ ಕೆರಳಿಸಿದೆ.

'ಟಾಯ್ಲೆಟ್ ಏಕ್ ಪ್ರೇಮ್‌ಕಥಾ' ಮತ್ತು 'ಪ್ಯಾಡ್‌ಮ್ಯಾನ್' ಚಿತ್ರದ ಮೂಲಕ ಸಾಮಾಜಿಕ ಪರಿಣಾಮ ಬೀರುವ ಸಿನಿಮಾಗಳನ್ನು ಬೆನ್ನು ಹತ್ತಿರುವ ಅಕ್ಷಯ್, 'ಗೋಲ್ಡ್' ಚಿತ್ರದಲ್ಲೂ ಭಾರತದ ಕ್ರೀಡಾಳುಗಳ ಶ್ರಮವನ್ನು ಎತ್ತಿ ಹಿಡಿದಿದ್ದಾನೆ. ಖ್ಯಾತ ನಿರ್ದೇಶಕ ನೀರಜ್ ಪಾಂಡೆಯ 'ಕ್ರ್ಯಾಕ್' ಮತ್ತು ಕರಣ್ ಜೋಹರ್ ನಿರ್ದೇಶನದ 'ಕೇಸರ್' ಅಕ್ಷಯ್ ನಟಿಸುತ್ತಿರುವ ಇನ್ನೆರಡು ಚಿತ್ರಗಳು. ಕಳೆದ ಎರಡು ವರ್ಷಗಳಲ್ಲಿ ಹಲವು ಯಶಸ್ವೀ ಚಿತ್ರಗಳನ್ನು ನೀಡಿದ 51ರ ಹರೆಯದ ಅಕ್ಷಯ್, ಈ ವರ್ಷವೂ ಸೂಪರ್‌ಹಿಟ್ ಚಿತ್ರಗಳನ್ನು ನೀಡುವುದು ಖಚಿತ. ಈ ಮಟ್ಟಿಗೆ ಆತನೊಬ್ಬ ಅಕ್ಷಯಪಾತ್ರೆ ಎನ್ನಲಾಗುತ್ತಿದೆ.



# ಸೂರ್ಯ ಸಂಭ್ರಮ

ತಮಿಳಿನ ಸೂಪರ್‌ಸ್ಟಾರ್ ಸೂರ್ಯ ಖುಷಿಯಲ್ಲಿದ್ದಾನೆ. ಅದಕ್ಕೆ ಕಾರಣ ಅಮಿತಾಭ್ ಬಚ್ಚನ್! ಸೂರ್ಯ ಅಭಿನಯಿಸಲಿರುವ ಹೊಸ ಚಿತ್ರ ತಮಿಳು ಮತ್ತು ಹಿಂದಿಯಲ್ಲಿ ಏಕಕಾಲದಲ್ಲಿ ಶೂಟಿಂಗ್ ನಡೆಸಲಿದೆ. ಚಿತ್ರದ ಹೆಸರು 'ದಿ ಟಾಲ್ ಮ್ಯಾನ್.' ಈ ಚಿತ್ರದಲ್ಲಿ ಸೂರ್ಯನ ಜತೆಗೆ ನಟಿಸುತ್ತಿರುವುದು ಬಾಲಿವುಡ್‌ನ ಮೆಗಾಸ್ಟಾರ್ ಅಮಿತಾಭ್ ಬಚ್ಚನ್! ಇದು ಅಮಿತಾಭ್ ನಟಿಸುತ್ತಿರುವ ತಮಿಳಿನ ಮೊದಲ ಚಿತ್ರವೂ ಹೌದು. ಅಮಿತಾಭ್ ಜತೆಗೆ ನಟಿಸುವ ಕನಸನ್ನು ದಕ್ಷಿಣದ ಹಲವು ತಾರೆಯರು ಕಂಡದ್ದಿದೆ. ರಜನಿಕಾಂತ್ ಬಿಟ್ಟರೆ ಬೇರೆ ಯಾರಿಗೂ ಆ ಕನಸು ನನಸು ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಜಾಲತಾಣದಲ್ಲಿ ಸೂರ್ಯ ತನ್ನ ಖುಷಿಯನ್ನು ತಡೆಯಿಲ್ಲದೆ ಹಂಚಿಕೊಂಡಿದ್ದಾನೆ.

■ ಬಿಂದು